## ಶ್ರೀ ಸುತ್ತೂರು ಮಠ

ಚಾಮುಂಡಿಬೆಟ್ಟದ ತಪ್ಪಲು, ಮೈಸೂರು

# ಬೆಳದಿಂಗಳ ಸಂಗೀತ 292

**31 ಮೇ 2026 * ಭಾನುವಾರ * ಸಂಜೆ 6.00**

ದಿವ್ಯಾಶೀರ್ವಾದ

**ಪರಮಪೂಜ್ಯ ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳು**

ಜಗದ್ಗುರು ಶ್ರೀ ವೀರಸಿಂಹಾಸನ ಮಹಾಸಂಸ್ಥಾನ ಮಠ, ಸುತ್ತೂರು ಶ್ರೀಕ್ಷೇತ್ರ

ಗಾಯನ



ವಿದುಷಿ ಅರ್ಚನಾ ಎಲ್. ರಾವ್



ವಿದುಷಿ ಸಿ.ವಿ. ಶ್ರುತಿ
ವಯೋಲಿನ್



ವಿದ್ವಾನ್ ಸುನಿಲ್ ಸುಬ್ರಹ್ಮಣ್ಯಂ
ಮೃದಂಗ



ವಿದ್ವಾನ್ ರಾಜಾಪುರಂ ಆರ್. ಕಾರ್ತಿಕ್
ಖಂಜಿರ

**ಸರ್ವರಿಗೂ ಹಾರ್ದಿಕ ಸುಸ್ವಾಗತ**

**ವಿದುಷಿ ಅರ್ಚನಾ ಎಲ್. ರಾವ್‌ರವರು** ಸಂಗೀತದ ಕೌಟುಂಬಿಕ ಹಿನ್ನೆಲೆಯಿಂದ ಬಂದವರು. ಇವರ ತಾತ 'ಹರಿದಾಸ ಸಂಗೀತ ಗಾನರತ್ನ' ಎಂದು ಖ್ಯಾತರಾದ ದಿವಂಗತ ಕೋವಿಲಡಿ ಕೆ. ರಂಗರಾಜನ್‌ರವರು; ತಾಯಿ ಗಾನಕಲಾಕಸ್ತೂರಿ, ಕಲಾದೀಪ್ತಿ, ಸಂಗೀತ ಮಾಧುರಿ ಮೊದಲಾದ ಪ್ರಶಸ್ತಿಗಳಿಗೆ ಭಾಜನರಾಗಿರುವ ವಿದುಷಿ ಕೋವಿಲಡಿ ಆರ್. ಕಲಾರವರು. ಸೋದರಮಾವ ವಿದ್ವಾನ್ ಮಧ್ವಪ್ರಸಾದ್‌ರವರು ಖ್ಯಾತ ಮೃದಂಗ ವಾದಕರು. ತಾಯಿಯವರ ಬಳಿ ಕಳೆದ ಮೂರು ದಶಕಗಳಿಂದ ಸಂಗೀತಾಭ್ಯಾಸ ಮಾಡುತ್ತಿದ್ದಾರೆ. ಆಕಾಶವಾಣಿ ಮತ್ತು ಪ್ರಸಾರಭಾರತಿಯ 'ಎ' ಶ್ರೇಣಿ ಕಲಾವಿದರು. ಶಾಸ್ತ್ರಶುದ್ಧಿ ಸಂಪ್ರದಾಯನಿಷ್ಠೆ, ಮಾಧುರ್ಯ – ಇವರ ಸಂಗೀತದ ವೈಶಿಷ್ಟ್ಯ. ರಾಗ–ತಾನ–ಪಲ್ಲವಿ ಇವರಿಗೆ ತುಂಬ ಪ್ರಿಯವಾದ ಕ್ಷೇತ್ರ. ಹಿಂದೂಸ್ತಾನಿ ಸಂಗೀತಗಾರರೊಂದಿಗೆ ಜುಗಲ್‌ಬಂದಿ ಕಾರ್ಯಕ್ರಮಗಳನ್ನು ಸಹ ನೀಡುತ್ತಿದ್ದಾರೆ. ಖ್ಯಾತ ಸಂಗೀತಗಾರರ ಕೃತಿಗಳ ವಿಷಯಾಧಾರಿತ ಪ್ರಾತ್ಯಕ್ಷಿಕೆ ಇವರ ಮತ್ತೊಂದು ವೈಶಿಷ್ಟ್ಯ. ಯುಟ್ಯೂಬ್ ಮತ್ತು ಡಿಜಿಟಲ್ ಮಾಧ್ಯಮಗಳಲ್ಲಿ ಕ್ರಿಯಾಶೀಲವಾಗಿರುವರು. ಅಮೆರಿಕದ ಮಾನ್ಯತೆ ಪಡೆದಿರುವ ಪಬ್ಲಿಕ್ ಅಕೌಂಟೆಂಟ್. ಚಾರ್ಟರ್ಡ್ ಅಕೌಂಟೆಂಟ್ ಮತ್ತು ಕಂಪನಿ ಸೆಕ್ರೆಟರಿಷಿಪ್‌ಗೆ ಸಂಬಂಧಿಸಿದ ಅಖಿಲ ಭಾರತ ಮಟ್ಟದ ಪರೀಕ್ಷೆಗಳಲ್ಲಿ ರ್‍ಯಾಂಕ್ ಪಡೆದಿರುವ ಪ್ರತಿಭಾವಂತರು. ಸ್ವತಃ ಬೆಂಗಳೂರಿನಲ್ಲಿ ಚಾರ್ಟರ್ಡ್ ಅಕೌಂಟೆಂಟ್ ಆಗಿರುವವರು. ಅನನ್ಯ ಯುವ ಪುರಸ್ಕಾರ, ಕಿಶೋರ ಪ್ರತಿಭೆ ಪ್ರಶಸ್ತಿ, ಅಖಿಲ ಭಾರತ ಆಕಾಶವಾಣಿ ಪ್ರಶಸ್ತಿ ಮೊದಲಾದ ಹತ್ತಾರು ಪ್ರತಿಷ್ಠಿತ ಪುರಸ್ಕಾರಗಳಿಗೆ ಭಾಜನರಾಗಿದ್ದಾರೆ.

**ವಿದುಷಿ** ಸಿ.ವಿ. **ಶ್ರುತಿಯವರು** ಸಂಗೀತದ ಕೌಟುಂಬಿಕ ಹಿನ್ನೆಲೆಯುಳ್ಳವರು. ಸಂಗೀತದ ಪ್ರಾಥಮಿಕ ಶಿಕ್ಷಣವನ್ನು ತಾತ ಶ್ರೀ ಸಿ.ಎಸ್. ನಾಗರಾಜ್‌ರವರಿಂದ ಕಲಿತರು. ಬಳಿಕ ಮೈಸೂರಿನ ಖ್ಯಾತ ವಯೊಲಿನ್ ವಿದ್ವಾಂಸರಾದ ಶ್ರೀ ಎಚ್.ಕೆ. ನರಸಿಂಹಮೂರ್ತಿಯವರ ಬಳಿ ಶಿಷ್ಯವೃತ್ತಿ ಕೈಗೊಂಡರು. ಪ್ರಸ್ತುತ ಅಕ್ಕರೈ ಸಹೋದರಿಯರಲ್ಲಿ ಉನ್ನತ ಸಂಗೀತ ಶಿಕ್ಷಣ ಮುಂದುವರಿಕೆ. ಗಾನಭಾರತಿ ಸಂಸ್ಥೆಯು ನಡೆಸಿದ ನಾದಕಿಶೋರೋತ್ಸವದಲ್ಲಿ (2019) ಅತ್ಯುತ್ತಮ ಪಕ್ಕವಾದ್ಯ

ಸಾಥಿ ಪ್ರಶಸ್ತಿ; ನಾದಮಯ ಸಂಸ್ಥೆಯಿಂದ (2022) ವಯೊಲಿನ್ ಸೋಲೋ ಮತ್ತು ಪಕ್ಕವಾದ್ಯ ಎರಡರಲ್ಲೂ ಅತ್ಯುತ್ತಮ ಸಾಧನೆಗಾಗಿ ಪ್ರಶಸ್ತಿ ಲಭಿಸಿವೆ. ಮೈಸೂರು ಆಕಾಶವಾಣಿಯ 'ಎ' ಶ್ರೇಣಿ ಕಲಾವಿದರು.

**ವಿದ್ವಾನ್ ಸುನಿಲ್ ಸುಬ್ರಹ್ಮಣ್ಯಂರವರು** ಶೃಂಗೇರಿಯ ಭಜನಾ ಸಂಪ್ರದಾಯದ ಕೌಟುಂಬಿಕ ಹಿನ್ನೆಲೆಯಿಂದ ಬಂದಿರುವರು. ಮೃದಂಗ ವಾದನದ ಪ್ರಾರಂಭಿಕ ಶಿಕ್ಷಣವನ್ನು ತಂದೆ ವಿದ್ವಾನ್ ಸುಬ್ರಹ್ಮಣ್ಯ ಮತ್ತು ವಿದ್ವಾನ್ ಶೃಂಗೇರಿ ರಾಮಚಂದ್ರರಾವ್‌ರವರ ಬಳಿ ಪಡೆದರು. ಬಳಿಕ ಬೆಂಗಳೂರಿನ ಖ್ಯಾತ ಮೃದಂಗ ಕಲಾವಿದ ವಿದ್ವಾನ್ ಅರ್ಜುನ್ ಕುಮಾರ್‌ರವರ ಬಳಿ ಉನ್ನತ ತರಬೇತಿ ಪಡೆದರು. ದೇಶವಿದೇಶಗಳ ನೂರಾರು ಜನ ವಿದ್ಯಾರ್ಥಿಗಳಿಗೆ ಮೃದಂಗ ವಾದನವನ್ನು ಕಲಿಸುತ್ತಿದ್ದಾರೆ. ಆಕಾಶವಾಣಿ ಮತ್ತು ದೂರದರ್ಶನದ 'ಎ' ಶ್ರೇಣಿ ಕಲಾವಿದರು. ಬೆಂಗಳೂರಿನ ಪರ್ಕ್ಯುಸಿವ್ ಆರ್ಟ್ ಸೆಂಟರ್ ಮತ್ತು ಕರ್ನಾಟಿಕ್ ಮ್ಯೂಸಿಕ್ ಅಸೋಸಿಯೇಷನ್ ಆಫ್ ನಾರ್ತ್ ಅಮೆರಿಕ ಹಾಗೂ ಅನನ್ಯ ಯುವ ಪುರಸ್ಕಾರಗಳಿಗೆ ಭಾಜನರಾಗಿದ್ದಾರೆ.

**ವಿದ್ವಾನ್ ರಾಜಾಪುರಂ ಆರ್. ಕಾರ್ತಿಕ್‌ರವರು** ಖ್ಯಾತ ಕಲಾವಿದರಾದ ಬೆಂಗಳೂರು ವಿ. ಪ್ರವೀಣ್, ಕೆ.ಎನ್. ಕೃಷ್ಣಮೂರ್ತಿ ಮತ್ತು ಎಂ.ಜಿ. ಗೋಪಾಲಕೃಷ್ಣನ್‌ರವರುಗಳ ಬಳಿ ಶಿಷ್ಯವೃತ್ತಿ ಮಾಡಿದ್ದಾರೆ. ಖಂಜಿರ ಕಲಾವಿದರಾದ ವಿದ್ವಾನ್ ಸಿ.ಪಿ. ವ್ಯಾಸವಿಠಲರವರ ಬಳಿ ಖಂಜಿರ ತರಬೇತಿ ಪಡೆಯುತ್ತಿದ್ದಾರೆ. ಬೆಂಗಳೂರು ಆಕಾಶವಾಣಿಯಲ್ಲಿ ಖಂಜಿರ, ಮೃದಂಗ ಮತ್ತು ಕೊನ್ನಕ್ಕೋಲ್ ವಾದನದಲ್ಲಿ 'ಎ' ಶ್ರೇಣಿ ಕಲಾವಿದರು. ಮೃದಂಗ ವಿದ್ವತ್ ಪರೀಕ್ಷೆಯಲ್ಲಿ ಎರಡನೆಯ ರ್‍ಯಾಂಕ್ ಪಡೆದಿರುವರು ಕಳೆದ ಎರಡು ದಶಕಗಳಿಂದಲೂ ಕರ್ನಾಟಕ ಸಂಗೀತ ಕ್ಷೇತ್ರದಲ್ಲಿ ಸಕ್ರಿಯರಾಗಿದ್ದಾರೆ. ದುಬೈ, ಮಸ್ಕತ್ ಮೊದಲಾದ ಹಲವಾರು ದೇಶಗಳಲ್ಲಿ ಸಂಗೀತ ಪ್ರಸ್ತುತಿ ಪಡಿಸಿದ್ದಾರೆ. ದೇಶವಿದೇಶಗಳಲ್ಲಿ ಹಲವಾರು ವಿದ್ಯಾರ್ಥಿಗಳಿಗೆ ಮೃದಂಗವನ್ನು ಕಲಿಸುತ್ತಿದ್ದಾರೆ. ಖಂಜಿರ ವಾದನದ ಉನ್ನತ ಸಾಧನೆಗಾಗಿ ಇವರಿಗೆ 'ಕಲಾವಂತ' ಪ್ರಶಸ್ತಿ ಲಭಿಸಿದೆ. ಅನನ್ಯ ಪುರಸ್ಕಾರಕ್ಕೆ ಸಹ ಭಾಜನರಾಗಿದ್ದಾರೆ.

# ಬೆಳದಿಂಗಳ ಸಂಗೀತ 293

**29 ಜೂನ್ 2026**

**ಗಾಯನ**

**ವಿದ್ವಾನ್ ಸಿದ್ಧಾರ್ಥ ಬೆಳ್ಮಣ್ಣು**

**ವಯೊಲಿನ್**

**ವಿದ್ವಾನ್ ಮೈಸೂರು ಎನ್. ಕಾರ್ತಿಕ್**

**ಘಟಂ**

**ವಿದ್ವಾನ್ ಗಿರಿಧರ್ ಉಡುಪ**

**ಡ್ರಮ್ಸ್**

**ವಿದ್ವಾನ್ ಅರುಣ್ ಕುಮಾರ್**

---

☎ 0821–2548221, 2548223 * ✉ sutturmath@jssonline.org